**CC** 332–2019

**CW**–1 **PW**–1

## 1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ ಶಿರಸಿ

**ಸತ್ಯ ಪ್ರತಿಜ್ಞೆಯ ಮೇರೆಗೆ ಃ ದಿನಾಂಕ ಃ** 02.12.2019

| | | |
|---|---|---|
| ಸಾಕ್ಷಿದಾರರ ಹೆಸರು | – | ಶಕುಂತಲಾ ನಾಯ್ಕ |
| ಗಂಡನ ಹೆಸರು | – | ಸದಾನಂದ ನಾಯ್ಕ |
| ವಯಸ್ಸು | – | 66 ವರ್ಷ |
| ಉದ್ಯೋಗ | – | ನಿವೃತ್ತ ಸರ್ಕಾರಿ ನೌಕರ. |
| ವಾಸ್ತವ್ಯ | – | ಕೆ.ಹೆಚ್.ಬಿ. ಕಾಲೋನಿ, ಶಿರಸಿ. |

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ಈಗ ತೋರಿಸಿದ ಸಹಿ ನನ್ನದೇ. ಸಾಕ್ಷಿಯು ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿ.ಪಿ. 1 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. 2014 ರಲ್ಲಿ ನಮ್ಮ ಮನೆ ಕಳ್ಳತನವಾದಾಗ ದೂರು ಕೊಟ್ಟಿದ್ದೆ. ನಾವು ಕೆ.ಹೆಚ್.ಬಿ. ಕಾಲೋನಿಯಲ್ಲಿ ಅರುಣ್ ಪ್ರಭು ಇವರ ಮನೆಯಲ್ಲಿ ಬಾಡಿಗೆಗೆ ಇದ್ದೆವು. ಮನೆಯಲ್ಲಿ ನಾನು , ನನ್ನ ಮಗ ಮತ್ತು ಮೊಮ್ಮಗಳು ಇದ್ದರು . ನಾನು ಕೆಲಸಕ್ಕೆ ಹೋಗಿದ್ದೆ . ಮಗ ವಿ.ಆರ್.ಎಲ್.ನಲ್ಲಿ ಕೆಲಸಕ್ಕೆ ಹೋಗಿದ್ದ. ಮೊಮ್ಮಗಳು ಡಾನ್ ಬಾಸ್ಕೋ ಶಾಲೆಗೆ ಹೋಗಿದ್ದಳು. ನನಗೆ ಈಗ ದಿನಾಂಕ ಸರಿಯಾಗಿ ನೆನಪಾಗುತ್ತಿಲ್ಲ. ನನ್ನ ದೂರಿನಲ್ಲಿ ಬರೆದಿದ್ದೆ 4 ವರ್ಷಗಳಾಗಿರುವುದರಿಂದ ನೆನಪಿಲ್ಲ. ನಾನು ಪಂಡಿತ್ ಜನರಲ್ ಆಸ್ಪತ್ರೆಯಲ್ಲಿ ಕೆಲಸಕ್ಕೆ ಹೋಗುವಾಗ ಮಧ್ಯಾಹ್ನ 3.10 ರ ಬಸ್ಸಿಗೆ ಮನೆಯಿಂದ 3 ಗಂಟೆಗೆ ಹೊರಟು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದೆ . ನಾನು ವಾಪಸ್ಸು 4.30 ರಿಂದ 4.45 ರ ಸಮಯಕ್ಕೆ ಮನೆಗೆ ಬಂದು ಮುಂದಿನ ಬೀಗ ತೆಗೆದು ನೋಡಿದಾಗ ಬಾಗಿಲು ಒಳಗಿನಿಂದ ಚಿಲಕ ಹಾಕಿದ್ದು ಬಾಗಿಲು ತೆರೆಯಲಿಲ್ಲ. ನಾನು ಮನೆಯ ಹಿಂಬದಿಗೆ ಹೋಗಿ ನೋಡಿದಾಗ ಹಿಂಬಾಗಿಲು ಒಬ್ಬರು ಮನುಷ್ಯರು ನುಸುಳುವಷ್ಟು ಮಾತ್ರ ಓಪನ್ ಆಗಿತ್ತು . ಅದು ಕಟ್ಟಿಗೆಯ ಬಾಗಿಲು ಆಗಿದ್ದು ಮಳೆ ನೀರು ಬಂದು ಹಾಳಾಗಿದ್ದರಿಂದ ಕೆಳಗೆ ಅಷ್ಟು ಭಾಗಕ್ಕೆ ಮಾತ್ರ ತಗಡು ಬಡಿದಿದ್ದರು. ಅಷ್ಟು ತಗಡು ತೆಗೆದು ಬಾಗಿಲು ಒಡೆದಿದ್ದರು . ನಾನು ಅಕ್ಕಪಕ್ಕದವರನ್ನು ಕರೆದು ತೋರಿಸಿದೆ. ನಾವು ಯಾರೂ ಒಳಗೆ ಹೋಗಲಿಲ್ಲ. ಪೋಲೀಸರಿಗೆ ಕರೆ ಮಾಡಿದ ನಂತರ ಪೋಲೀಸರೇ ಬಂದು ನೋಡಿದರು . ಸುಮಾರು 100 ಜನ ಸೇರಿದ್ದರು. ನಂತರ ಪೋಲೀಸರೇ

ಹಿಂಬಾಗಿಲು ಒಡೆದು ಒಳಗೆ ಹೋದರು . ಒಳಗೆ ಹೋಗಿ ನೋಡಿದಾಗ ದೇವರ ಕೋಣೆಯಲ್ಲಿದ್ದ ಕಬೋರ್ಡ್ ಓಪನ್ ಆಗಿತ್ತು. ನಾನು ಜಾಗ ಖರೀದಿಸಲು ಕೆ.ಡಿ.ಸಿ.ಸಿ. ಬ್ಯಾಂಕ್‌ನಿಂದ 1,40,000/– ರೂ. ತಂದು ಇಟ್ಟಿದ್ದು, ಅದರಲ್ಲಿ 80,000/– ರೂ.ಗಳನ್ನು ಕರ್ಚೀಫ್‌ನಲ್ಲಿ ಕಟ್ಟಿ ಇಟ್ಟಿದ್ದೆ. ಅದನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು. ಟೇಬಲ್ ಮೇಲೆ ಇಟ್ಟಿದ್ದ 2 ಮೊಬೈಲ್ ಫೋನ್‌ಗಳು ಮತ್ತು ದೇವರ ಹುಂಡಿಯನ್ನು ತೆಗೆದುಕೊಂಡು ಹೋಗಿದ್ದರು. ನಾನು ಮೊದಲು ದೂರು ಕೊಟ್ಟಿರಲಿಲ್ಲ . ಒಂದೆರಡು ದಿನಗಳಲ್ಲಿ ನನ್ನ ಮೊಮ್ಮಗ ಬಂದ ನಂತರ ದೂರು ಕೊಟ್ಟಿದ್ದೇನೆ.

ನಂತರ ಪೋಲೀಸರು 2–3 ಸಲ ಬಂದಿದ್ದರು. ಘಟನೆಯ ಬಗ್ಗೆ ಕೇಳಿಕೊಂಡು ಹೋದರು. ಬೇರೆ ಏನು ಬರವಣಿಗೆ ಮಾಡಿದ್ದ ಬಗ್ಗೆ ಗೊತ್ತಿಲ್ಲ . ಪೋಲೀಸರು ಒಮ್ಮೆ ಕಾರವಾರದಿಂದ ಒಬ್ಬ ಆರೋಪಿಯನ್ನು ಕರೆದುಕೊಂಡು ನಮ್ಮ ಮನೆಯ ಹತ್ತಿರ ಬಂದಿದ್ದರು. ಆತ ನಾನು ಈ ಮನೆಯಲ್ಲಿ ಕಳ್ಳತನ ಮಾಡಿಲ್ಲ, ಬೇರೆ ಮನೆ ಮರಾಠಿಕೊಪ್ಪದಲ್ಲಿ ಕಳ್ಳತನ ಮಾಡಿದ್ದೇನೆ ಎಂದು ಪೋಲೀಸರ ಹತ್ತಿರ ಹೇಳುತ್ತಿದ್ದ. ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಆರೋಪಿಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿಗೆ ತೋರಿಸಲು ಕರೆದುಕೊಂಡು ಹೋಗಲಾಯಿತು.

ಸಾಕ್ಷಿಯು 1 ಮತ್ತು 2 ನೇ ಆರೋಪಿಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನೋಡಿ ಈ ಆರೋಪಿಗಳಲ್ಲಿ ಯಾರನ್ನೂ ಸಹ ಪೋಲೀಸರು ಮನೆಯ ಹತ್ತಿರ ಕರೆದುಕೊಂಡು ಬಂದಿರಲಿಲ್ಲ ಎಂದು ಹೇಳುತ್ತಾರೆ. ನಾನು ಪೋಲೀಸರಿಗೆ ಕಳ್ಳತನ ಮಾಡಿರುವ ಆರೋಪಿಗಳ ಬಗ್ಗೆ ಯಾವುದೇ ಮರು ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ.ರವರಿಂದಃ**

ನಮ್ಮ ಮನೆಯ ಕಳ್ಳತನವಾದ ದಿನಾಂಕ 20.02.2014 ಆಗಿತ್ತು ಎಂದರೆ ಸರಿ. ನನ್ನ ಮಗ ವಿಶ್ವನಾಥ ಬಂದ ನಂತರ ದಿನಾಂಕ 04.03.2014 ರಂದು ದೂರು ನೀಡಿದ್ದೆ ಎಂದರೆ ಸರಿ . 5 ನೇ ತಾರೀಖಿನಂದು ಪೋಲೀಸರು ಮನೆಯ ಬಳಿ ಬಂದು ಸ್ಥಳ ಪರಿಶೀಲನೆ ಮಾಡಿ ಪಂಚನಾಮೆ ಮಾಡಿದ್ದರು ಎಂದರೆ ಸರಿ . ದಿನಾಂಕ 03.12.2014 ರಂದು ಪೋಲೀಸರು ಈ ಪ್ರಕರಣದ ಆರೋಪಿಗಳಾದ ಮಂಜುನಾಥ, ಜಂಬಣ್ಣ ಅಗಸ್ತವರ್ ಮತ್ತು ಮಂಜುನಾಥ ಹುಲಿಗೆಪ್ಪ ಗವಾಡಿ

ಎಂಬ ಇಬ್ಬರು ಅರೋಪಿಗಳನ್ನು ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದಾಗ ಆ ಇಬ್ಬರೂ ಆರೋಪಿಗಳೂ ನಾವೇ ಮನೆಯ ತಗಡನ್ನು ಒಡೆದು ಒಳಗೆ ಹೋಗಿ ಕಪಾಟಿನಲ್ಲಿದ್ದ 80,000/- ರೂ.ಗಳನ್ನು ಮತ್ತು ಮೊಬೈಲ್‌ಗಳನ್ನು ಕಳ್ಳತನ ಮಾಡಿರುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ . ಈಗ ನಾನು ನೋಡಿದ ಇಬ್ಬರು ಆರೋಪಿಗಳನ್ನೇ ಆ ದಿನ ಪೋಲೀಸರು ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಅವರೇ ತಾವು ಕಳ್ಳತನ ಮಾಡಿರುವುದಾಗಿ ಹೇಳಿ ಒಪ್ಪಿಕೊಂಡಿದ್ದು ಈ ಬಗ್ಗೆ ಆರೋಪಿಗಳನ್ನು ಗುರುತಿಸಿ ನಾನು ಈಗ ಓದಿ ಹೇಳಿದಂತೆ ಮರುಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ . ಆರೋಪಿಗಳು ಹಣವನ್ನು ಖರ್ಚು ಮಾಡಿರುವುದಾಗಿ ಮತ್ತು ಮೊಬೈಲ್‌ಗಳನ್ನು ಮಾರಾಟ ಮಾಡಿರುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ . ಸಾಕ್ಷಿಯ ಮರು ಹೇಳಿಕೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಾನು ನಿ.ಪಿ. 2 ರಂತೆ ಮರುಹೇಳಿಕೆ ನೀಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇರುವುದಿಲ್ಲ.**

( ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**1 ನೇ ಹೆ.ಪ್ರ.ದ.ನ್ಯಾ.ದಂ., ಶಿರಸಿ.**